ಇ) ಇಲ್ಲ.

ಈ) ನಗದು ಹಣ ರೂ. ೪,೪೬,೮೦೦
ಬಂಗಾರದ ಆಭರಣ ರೂ. ೮,೨೦,೦೦೦
ಬೆಳ್ಳಿಯ ವಸ್ತುಗಳು ರೂ. ೩೫,೦೦೦
ತಾಮ್ರದ ವಸ್ತುಗಳು ರೂ. ೫,೦೦೦
ಬಟ್ಟೆಬರೆಗಳು ರೂ. ೩೦,೦೦೦

ಇದಲ್ಲದೆ ೬ ರಿವಾಲ್ವರ್ ಗುಂಡುಗಳು, ೧೭ ರೈಫಲ್ ಗುಂಡುಗಳು, ೧೦ ಸಿಡಿಮದ್ದು ಸ್ಫೋಟಿಸುವ ಕೇಪ್‌ಗಳು, ೧ ರಾಮಪುರಿ ಚಾಕು ೧ ದೇಶಿಯ ರಿವಾಲ್ವರ್ ಇವನ್ನು ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಂಡು ಎಲ್ಲಾ ವಸ್ತುಗಳನ್ನು ಬೆಳಗಾಂ ರೈಲ್ವೆ ಪೋಲೀಸ್ ಠಾಣೆಯಲ್ಲಿ ಸುರಕ್ಷಿತವಾಗಿ ಇಡಲಾಗಿದೆ.

ಕಾರವಾರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಪ್ರಾರಂಭಿಸಲು ಮನವಿ

೧೬೬. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ)—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಾರವಾರದಲ್ಲಿ ಸರಕಾರಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲು ಸರಕಾರಕ್ಕೆ ಬಂದಿರುವ ಅಡಚಣೆಗಳೇನು ?

ಆ) ಜಿಲ್ಲೆಗೆ ಒಂದು ವೈದ್ಯಕೀಯ ಕಾಲೇಜು ಪ್ರಾರಂಭಿಸುವ ಸರಕಾರದ ಉದ್ದೇಶ ಇಲ್ಲಿ ಅನ್ವಯಿಸುವುದಿಲ್ಲವೆ ?

ಇ) ಘಟಪ್ರಭಾದಲ್ಲಿರುವ ಸಹಕಾರಿ ಆಸ್ಪತ್ರೆ ಹಾಗೂ ಕರ್ನಾಟಕ ಆರೋಗ್ಯ ಸಂಸ್ಥೆ ಎರಡೂ ವೈದ್ಯಕೀಯ ಸಂಸ್ಥೆಗಳು ಸವಲತ್ತುಗಳನ್ನು ಪಡೆದು ಸರಕಾರಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲು ಅನುಮತಿ ನೀಡದಿರಲು ಕಾರಣವೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು)—

ಅ) ಈಗಾಗಲೇ,ರಾಜ್ಯದಲ್ಲಿ ೧೭ ವೈದ್ಯಕೀಯ ಕಾಲೇಜುಗಳು ಇದ್ದು ಅವುಗಳಲ್ಲಿ ೮ ಖಾಸಗಿ ಕಾಲೇಜುಗಳಿಗೆ ಭಾರತೀಯ ವೈದ್ಯ ಪರಿಷತ್ತಿನ ಮಾನ್ಯತೆಯನ್ನು ಪಡೆದಿರುವುದಿಲ್ಲ, ಆದ ಕಾರಣ ಸರ್ಕಾರವು ೧೯೮೭-೮೮ನೇ ಸಾಲಿನಲ್ಲಿ ಯಾವುದೇ ಹೊಸ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಬಾರದೆಂದು ನಿರ್ಧರಿಸಿದೆ. ಸಾಕಷ್ಟು ಸೌಲಭ್ಯಗಳಿಲ್ಲದೆ ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವುದರಿಂದ ವೈದ್ಯಕೀಯ ಶಿಕ್ಷಣದ ಗುಣಮಟ್ಟವು ಕಡಿಮೆಯಾಗುತ್ತದೆ.

ಆ) ('ಅ'ನಲ್ಲಿ ಉತ್ತರಿಸಿರುವುದರಿಂದ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ('ಅ'ನಲ್ಲಿ ಉತ್ತರಿಸಿರುವುದರಿಂದ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಸಣ್ಣ ಉಳಿತಾಯ

೭೦೪. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್)-ಮಾನ್ಯ ಹಣಕಾಸು, ಸಣ್ಣ ಉಳಿತಾಯ ಮತ್ತು ಒಂದೀಕರಣಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಣ್ಣ ಉಳಿತಾಯ ಯೋಜನೆಯಡಿ ೩೧-೧೨-೧೯೮೭ರ ವರೆಗೆ ರಾಜ್ಯದಲ್ಲಿ ಸಂಗ್ರಹಿಸಲಾದ ಹಣದ ಮೊತ್ತವೆಷ್ಟು ?

ಆ) ಈ ಹಣದಲ್ಲಿ ರಾಜ್ಯ ಸರ್ಕಾರಕ್ಕೆ ಸಾಲದ ರೂಪದಲ್ಲಿ ದೊರೆತಿರುವ ಮೊತ್ತವೆಷ್ಟು ?

ಇ) ಇಂದಿರಾ ವಿಕಾಸ್ ಪತ್ರಗಳಿಂದ ಸಂಗ್ರಹಿಸಲಾದ ಹಣದ ಮೊತ್ತವೆಷ್ಟು ?

ಈ) ಇವೆರಲ್ಲಿ ರಾಜ್ಯಕ್ಕೆ ದೊರೆತ ಸೌಲಭ್ಯಗಳೇನು ?

ಶ್ರೀ ವೀರಣ್ಣ (ಹೆಣಕಾಸು, ಸಣ್ಣ ಉಳಿತಾಯ ಮತ್ತು ಬಂದೀಖಾನೆಗಳು ರಾಜ್ಯ ಸಚಿವರು)—

ಅ) ೩೧–೧೨–೧೯೮೭ರ ವರೆಗೆ ಸಂಗ್ರಹಿಸಲಾದ ಸಣ್ಣ ಉಳಿತಾಯದ ಮೊಬಲಗು — ಒಟ್ಟು ... ರೂ. ೩೨೭.೧೪ ಕೋಟಿ.

ಆ) ಪ್ರಸಕ್ತ ಸಾಲಿನಲ್ಲಿ ನವೆಂಬರ್‌ವರೆವಿಗೂ ಬಿಡುಗಡೆ ಆದ ಮೊತ್ತ ರೂ. ೧೯ ಕೋಟಿ.

ಇ) ಇಂದಿರಾ ವಿಕಾಸ ಪತ್ರಗಳ ಮೂಲಕ ಡಿಸೆಂಬರ್ ಅಂತ್ಯದವರೆಗೆ ೫೨.೦೩ ಕೋಟಿ ಹಣ ಸಂಗ್ರಹಿಸಲಾಗಿದೆ.

ಈ) ಇಂದಿರಾ ವಿಕಾಸ ಪತ್ರಗಳಲ್ಲಿ ಸಂಗ್ರಹಿಸಲಾದ ಹಣಕ್ಕೆ ಪ್ರತ್ಯೇಕವಾಗಿ ಹಣ ಬಿಡುಗಡೆ ಮಾಡುವುದಿಲ್ಲ.

ಮಾಜಿ ಶಾಸಕರಿಗೆ ಆಗಂತ್ತಿರುವ ತೊಂದರೆಯ ಬಗ್ಗೆ.

೧೬೭. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕಾನೂನು ಮಂತ್ರಿ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸ್ತವರೇ ?

ಅ) ಮಾಜಿ ಶಾಸಕರಿಗೆ ರಾಜ್ಯದಲ್ಲಿ ಸಂಚರಿಸಲು ಬಸ್ ಪಾಸ್ ನೀಡಲು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು ?

ಆ) ಅವರಿಗೆ ವೈದ್ಯಕೀಯ ಸೌಲಭ್ಯವನ್ನು ಕೊಡುವ ಬಗ್ಗೆ ಸರ್ಕಾರದ ನಿಲುವೇನು ?

ಇ) ಮಾಜಿ ಶಾಸಕರಿಂದ ಹಾಗೂ ಇತರರಿಂದ ಈ ಬಗ್ಗೆ ಸರಕಾರಕ್ಕೆ ಮನವಿಗಳು ಬಂದಿರುವುದ ನಿಜವೆ ?

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು) —

ಅ) ವಿಶೇಷ ಮಂಡಲಿ. ಕರ್ನಾಟಕ ವಿಧಾನ ಮಂಡಲವು, ದಿನಾಂಕ ೨೧–೧–೧೯೮೬ರಂದು ನಡೆದ ಸಭೆಯಲ್ಲಿ ಮಾಜಿ ಶಾಸಕರಿಗೆ ಬಸ್ ಪಾಸುಗಳನ್ನು ಮತ್ತು ವೈದ್ಯಕೀಯ ಸೌಲಭ್ಯಗಳನ್ನು ನೀಡಲು ಇದು ಸೂಕ್ತ ಸಮಯವಲ್ಲವೆಂದು ನಿರ್ಧರಿಸಿದೆ.

ಆ) – ಡಿಟೋ –

ಇ) ನಿಜ.

ಹೆರಿಗೆ ಭತ್ಯೆ ಮತ್ತು ಆರೋಗ್ಯ ಮಾರ್ಗದರ್ಶಕರಿಗೆ ಕೊಟ್ಟ ಗೌರವಧನ.

೫೦೩. ಶ್ರೀಮತಿ ಸುಮಾವಸಂತ(ವಿರಾಜಪೇಟೆ).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಯಲ್ಲಿ ಇಲಾಖೆ ಪತಿಯಿಂದ ಬಟವಾಡೆಯಾದ (೧) ಹೆರಿಗೆ ಭತ್ಯೆ (೨) ಆರೋಗ್ಯ ಮಾರ್ಗದರ್ಶಕರಿಗೆ ಕೊಟ್ಟ ಗೌರವಧನ ಒಟ್ಟು ಮೊತ್ತವೆಷ್ಟು ?

ಆ) ಇವರೆಡೂ ಸರಿಯಾಗಿ ಫಲಾನುಭವಿಗಳಿಗೆ ಹಾಗೂ ಮಾರ್ಗದರ್ಶಕರಿಗೆ ಸೇರುತ್ತಿಲ್ಲವೆಂಬ ದೂರು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಫಲಾನುಭವಿಗಳಿಗೆ ಹೆರಿಗೆ ಭತ್ಯೆ ಕೊಡುವಾಗ ಸಂಬಂಧಪಟ್ಟ ಆರೋಗ್ಯ ಘಟಕ ಹಾಗೂ ಕೊಡುವ ವಿಧಾನ ಚೆಕ್ ಮೂಲಕ ಎಂಬ ಆದೇಶ ಸರ್ಕಾರ ಮಾಡಿದೆ ಇದ್ದು, ಇದರಿಂದ ಫಲಾನುಭವಿಗಳಿಗೆ ಬಟವಾಡೆ ಆಗದೇ ಇರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಇನ್ನು ಮುಂದಾದರೂ ಬಟವಾಡೆ ಕ್ರಮ ಬದಲಾಯಿಸಿ ಸಂಬಂಧಿಸಿದ ಆರೋಗ್ಯ ಘಟಕ ಹಾಗೂ ಚೆಕ್ ಮುಖಾಂತರ ಬಟವಾಡೆ ಆದೇಶವನ್ನು ಸರಕಾರ ಕೊಡಲೇ ಹೊರಡಿಸುವುದೇ ?